ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951
भारतीय मानक ब्यूरो IS / ISO 9001:2008
Bureau of Indian Standards QMS

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./ 2.563/20-21
Ref. No. KSFC/H.O./

ದಿನಾಂಕ :
Date 08/09/2020

**ಸುತ್ತೋಲೆ - 40**

ವಿಷಯ: ಉದ್ಯೋಗಿಗಳು ತಮ್ಮ ಕೋರಿಕೆಗಳ ಬಗ್ಗೆ ಅನಾವಶ್ಯಕವಾಗಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರನ್ನು ಭೇಟಿ ಮಾಡುತ್ತಿರುವುದು ಮತ್ತು ವರ್ಗಾವಣೆ ಕೋರಿಕೆಗಳ ಅರ್ಜಿಗಳನ್ನು ವ್ಯವಸ್ಥಾಪಕ ನಿರ್ದೇಶಕರವರ ಕಛೇರಿಗೆ ಕಳುಹಿಸುತ್ತಿರುವುದರ ಬಗ್ಗೆ.

-------------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಂಸ್ಥೆಯಲ್ಲಿ ನಿಯಮಗಳನುಸಾರ ಉದ್ಯೋಗಿಗಳು ವರ್ಗಾವಣೆ ಕೋರಿಕೆ ಅರ್ಜಿಗಳನ್ನು ಶಾಖಾ ವ್ಯವಸ್ಥಾಪಕರ ಮುಖಾಂತರ ಸಿಬ್ಬಂದಿ ವಿಭಾಗದ ಮುಖ್ಯಸ್ಥರಿಗೆ ಕಳುಹಿಸಬೇಕೆಂಬ ನಿಯಮವಿರುತ್ತದೆ. 2020 ಚಾಲ್ತಿ ವರ್ಷದಲ್ಲಿ ಕೋವಿಡ್-19 ಮಹಾಮಾರಿಯು ವ್ಯಾಪಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಈ ವರ್ಷ ಸಾಮಾನ್ಯ ವರ್ಗಾವಣೆಯನ್ನು ಮಿತಿಗೊಳಿಸಲಾಗಿದೆ.

ಆದರೆ, ಸಂಸ್ಥೆಯ ಕೆಲವು ಉದ್ಯೋಗಿಗಳು ತಮ್ಮ ಅಹವಾಲುಗಳನ್ನು ನೇರವಾಗಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಕಛೇರಿಗೆ ಕಳುಹಿಸುತ್ತಿದ್ದು ಮತ್ತು ವರ್ಗಾವಣೆ ಕೋರಿಕೆಗಳ ಬಗ್ಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರನ್ನು ಅನಾವಶ್ಯಕವಾಗಿ ಭೇಟಿ ಮಾಡುತ್ತಿರುವುದು ಕಂಡುಬರುತ್ತಿದೆ. ಸಂಸ್ಥೆಯು ಅನುಸರಿಸುತ್ತಿರುವ ನಿಯಮಾವಳಿ ಅಡಿಯಲ್ಲಿ ಅನಾವಶ್ಯಕವಾಗಿ ಭೇಟಿ ಮಾಡುವ / ಬಾಹ್ಯ ಒತ್ತಡ ತರುವ ಯಾವುದೇ ಕೆಲಸಗಳು ಅಥವಾ ಕ್ರಮಗಳು ಸಂಸ್ಥೆಯ ನಿಯಮಾವಳಿಗಳ ಉಲ್ಲಂಘನೆಯಾಗಿರುತ್ತದೆ ಹಾಗೂ ಅಂತಹ ಉದ್ಯೋಗಿಗಳ ಮೇಲೆ ನಿಯಮಾನುಸಾರ ಶಿಸ್ತುಕ್ರಮ ಜರುಗಿಸುವ ಅವಕಾಶವಿರುವುದು. ಉದ್ಯೋಗಿಗಳು ವರ್ಗಾವಣೆ ಕೋರಿಕೆಗಳ ಸಂಬಂಧ ಮೊದಲು ಶಾಖಾ ವ್ಯವಸ್ಥಾಪಕರು / ವಿಭಾಗದ ಮುಖ್ಯಸ್ಥರ ಮುಖಾಂತರ ತಮ್ಮ ಅಹವಾಲನ್ನು ಪ್ರಧಾನ ಕಛೇರಿಯ ಸಿಬ್ಬಂದಿ ಮತ್ತು ಆಡಳಿತದ ಮುಖ್ಯಸ್ಥರಿಗೆ ಸಲ್ಲಿಸಿದ ನಂತರ ಅವಶ್ಯಕತೆಗೆ ಅನುಗುಣವಾಗಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರನ್ನು ಅವರ ಪೂರ್ವಾನುಮತಿಯನ್ನು ಪಡೆದು ಭೇಟಿ ಮಾಡಬಹುದಾಗಿರುತ್ತದೆ.

ಆದುದರಿಂದ ಸಂಸ್ಥೆಯ ಉದ್ಯೋಗಿಗಳು ಸಂಸ್ಥೆಯ ನಿಯಮಾವಳಿಗಳ ಪಾಲನೆಗೆ ಬದ್ಧರಾಗಿರಬೇಕೆಂದು ಈ ಸುತ್ತೋಲೆಯ ಮುಖಾಂತರ ಎಲ್ಲಾ ಉದ್ಯೋಗಿಗಳ ಗಮನಕ್ಕೆ ತರಲು ಸೂಚಿಸಲಾಗಿದೆ.

08/09/2020
**ಕಾರ್ಯನಿರ್ವಾಹಕ ನಿರ್ದೇಶಕರು-1**

ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
ಎಲ್ಲಾ ಶಾಖಾ ಕಛೇರಿಗಳ ಮುಖ್ಯಸ್ಥರುಗಳಿಗೆ,
ಆ.ಲೆ.ಪ ಕೋಶ, ಮೈಸೂರು, ಧಾರವಾಡ, ಗುಲ್ಬರ್ಗಾ ಮತ್ತು ಬೆಂಗಳೂರು.
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರು-2 ರವರಿಗೆ
ವ್ಯ.ನಿ. ರವರ ಕಛೇರಿಗೆ } ಮಾಹಿತಿಗಾಗಿ.
ಅಧ್ಯಕ್ಷರು, ಕರಾಹಸಂ ನೌಕರರ/ಅಧಿಕಾರಿಗಳ/ಪ.ಜಾ & ಪ.ಪಂ ನೌಕರರ ಸಂಘ,
ಗ್ರಂಥಾಲಯ / ಸೂಚನಾ ಫಲಕಕ್ಕೆ
ಕಛೇರಿ ಪ್ರತಿ